# ಕರ್ನಾಟಕ ಲೋಕಾಯುಕ್ತ

**ಸಂ.ಕಂಪ್ಲೆಂಟ್/ಉಪಲೋಕ್/ಜಿಎಲ್‌ಬಿ/1078/2021**
**ಪಿಓ/ಎ.ಆರ್.ಇ–2 (ಮಂಡನಾಧಿಕಾರಿಗಳ ಶಾಖೆ)**

ಬಹುಮಹಡಿಗಳ ಕಟ್ಟಡ,
ಡಾ॥ ಬಿ.ಆರ್.ಅಂಬೇಡ್ಕರ ರಸ್ತೆ,
ಬೆಂಗಳೂರು, ದಿನಾಂಕ: 03/09/2021.

6/9/21

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(3)ರ ಅನ್ವಯ ವರದಿ

ವಿಷಯ: ಸರ್ಕಾರಿ ನೌಕರರಾದ ಬಳ್ಳಾರಿ ಜಿಲ್ಲೆ ಮತ್ತು ತಾಲ್ಲೂಕು, ಜಾಲಿಬೆಂಚಿ ಗ್ರಾಮದ, ಗ್ರಾಮ ಲೆಕ್ಕಾಧಿಕಾರಿ ಶ್ರೀ. ಶಶಿಧರರವರು ಕರ್ತವ್ಯ ಲೋಪ/ದುರ್ನಡತೆ ಎಸಗಿರುವ ಬಗ್ಗೆ.

1. ಮಾನ್ಯ ಪೋಲಿಸ್ ಅಧೀಕ್ಷಕರು, ಭ್ರಷ್ಟಾಚಾರ ನಿಗ್ರಹ ದಳ, ಬಳ್ಳಾರಿ ವಲಯ, ಬಳ್ಳಾರಿ, ಇವರು ಪೋಲಿಸ್ ನಿರೀಕ್ಷಕರು ಭ್ರಷ್ಟಾಚಾರ ನಿಗ್ರಹ ದಳ, ಬಳ್ಳಾರಿ (ಇನ್ನು ಮುಂದೆ "ತನಿಖಾಧಿಕಾರಿ" ಎಂದು ಕರೆಯಲ್ಪಡುತ್ತಾರೆ), ಇವರ ತನಿಖಾ ವರದಿ ಮತ್ತು ಸಂಬಂಧಿಸಿದ ದಾಖಲೆಗಳೊಂದಿಗೆ ವರದಿಯನ್ನು ಸಲ್ಲಿಸಿದ್ದು, ಸದರಿ ವರದಿಯಲ್ಲಿ ಶ್ರೀ ಶಶಿಧರ ಬಿನ್ ಪ್ರಭುವೀರಸ್ವಾಮಿ, ಗ್ರಾಮ ಲೆಕ್ಕಾಧಿಕಾರಿ, ಜಾಲಿಬೆಂಚಿ ಗ್ರಾಮ, ತಾಲೂಕು ಮತ್ತು ಜಿಲ್ಲೆ ಬಳ್ಳಾರಿ (ಇನ್ನು ಮುಂದೆ "ಎದುರುದಾರರು" ಎಂದು ಕರೆಯಲ್ಪಡುತ್ತಾರೆ), ರವರು ದೂರುದಾರರಾದ ಶ್ರೀ ರಾಜಶೇಖರ ತಂದೆ ದೊಡ್ಡತಿಮ್ಮಯ್ಯ ಸಾ: ಜಾಲಿಬೆಂಚಿ ಗ್ರಾಮ, ಬಳ್ಳಾರಿ ತಾಲೂಕು, ಬಳ್ಳಾರಿ ಜಿಲ್ಲೆ, (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ), ರವರಿಂದ ಸರ್ಕಾರಿ ಕೆಲಸಕ್ಕೆ ಲಂಚದ ಹಣವನ್ನು ಪಡೆದು ಕರ್ತವ್ಯ ಲೋಪವೆಸಗಿರುವುದು ಮೇಲ್ನೋಟಕ್ಕೆ ಕಂಡು ಬಂದಿದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 7(2) ರನ್ವಯ ಗೌರವಾನ್ವಿತ ಉಪಲೋಕಾಯುಕ್ತರು ಸ್ವಯಂ ಪ್ರೇರಿತ ದೂರು ದಾಖಲಿಸಿಕೊಂಡು ತನಿಖೆ ತೆಗೆದುಕೊಂಡಾಗ ಈ ಕೆಳಗೆ ಹೇಳಿದ ಸಂಗತಿಗಳು ಮೇಲ್ನೋಟಕ್ಕೆ ಕಂಡು ಬರುತ್ತದೆ.

i. ದೂರುದಾರರು ಹಾಗು ಅವರ ಮನೆಯ 7 ಜನರ ಮೇಲೆ ಹಲ್ಲೆ ಆಗಿದ್ದರಿಂದ ದೂರುದಾರರು ಈ ಬಗ್ಗೆ ಪೋಲಿಸ್ ಠಾಣೆಯಲ್ಲಿ ಎಸ್.ಸಿ/ ಎಸ್.ಟಿ. ಕಾಯ್ದೆಯಡಿಯಲ್ಲಿ ದೂರುದಾಖಲಿಸಿದ್ದು ಮೊಕದ್ದಮೆ ಸಂ. 187/2017 ರಲ್ಲಿ ದೂರು ದಾಖಲಾಗಿದ್ದು, ಸದರಿ ಪ್ರಕರಣದಲ್ಲಿ ನೊಂದವರಿಗೆ ಪರಿಹಾರವಾಗಿ ಮಾನ್ಯ ಜಿಲ್ಲಾಧಿಕಾರಿಗಳು ಹಣ ಮಂಜೂರು ಮಾಡಿ, ದಿ: 11/12/2018 ರಂದು ಚೆಕ್‌ಗಳ ಮೂಲಕ ವಿತರಿಸಲು ಸದರಿ ಚೆಕ್‌ಗಳನ್ನು ಎದುರುದಾರರಿಗೆ ತಿಳಿಸಿದ್ದು,

ಎದುರುದಾರರು ಆ ಚೆಕ್ಕುಗಳನ್ನು 15 ದಿನಗಳಿಂದ ತಮ್ಮ ಹತ್ತಿರ ಇಟ್ಟುಕೊಂಡು ದಿ: 14/01/2019 ರಂದು ದೂರುದಾರರನ್ನು ತಾಲೂಕು ಕಛೇರಿಯಲ್ಲಿರುವ ತಮ್ಮ ಆಫೀಸ್‌ಗೆ ಕರೆಸಿಕೊಂಡು ಚೆಕ್ಕುಗಳನ್ನು ದೂರುದಾರರಿಗೆ ನೀಡಲು ರೂ.50,000/- ಕೊಡಬೇಕೆಂದು ಹೇಳಿದ್ದು, ದೂರುದಾರರು ತನ್ನ ತಂದೆಗೆ ತಿಳಿಸಿ ಮಾತನಾಡಿ ಹಣ ತಂದು ಮುಟ್ಟಿಸುವುದಾಗಿ ಮತ್ತು ಹಣ ಕೊಡುವ ಜವಾಬ್ದಾರಿ ತನ್ನದೆಂದು, ಚೆಕ್ಕುಗಳನ್ನು ಬ್ಯಾಂಕಿಗೆ ಹಾಕಿಕೊಂಡೆ ಹಣ ಕೊಡಬೇಕಾಗುತ್ತದೆ ಎಂದು ತಿಳಿಸಿದಾಗ, ಎದುರುದಾರರು ಸದರಿ ಚೆಕ್ಕುಗಳನ್ನು ದೂರುದಾರರಿಗೆ ನೀಡಿದ್ದು ಇರುತ್ತದೆ.

ii. ದೂರುದಾರರು ಎದುರುದಾರರಿಗೆ ಹಣವನ್ನು ಕೊಡದಿದ್ದರೆ ಚೆಕ್ಕುಗಳನ್ನು ಸ್ಟಾಪ್ ಮಾಡಬಹುದೆಂದು ತಿಳಿದು, ದಿನಾಂಕ 16-01-2019 ರಂದು ಬೆಳಿಗ್ಗೆ ದೂರುದಾರರು ತಮ್ಮ ಮೊಬೈಲ್‌ನಿಂದ ಎದುರುದಾರರ ಮೊಬೈಲ್ ಸಂಖ್ಯೆ 7899015758ನೇದ್ದಕ್ಕೆ ಫೋನ್ ಮಾಡಿದ್ದು, ಎದುರುದಾರರು ರಿಸೀವ್ ಮಾಡದೆ ನಂತರ ಎದುರುದಾರರೆ ಮಧ್ಯಾಹ್ನ 12:16 ಗಂಟೆಗೆ ತಮ್ಮ ಮೊಬೈಲ್‌ನಿಂದ ದೂರುದಾರರ ಮೊಬೈಲ್ ಸಂಖ್ಯೆ 9380790946ನೇದ್ದಕ್ಕೆ ಫೋನ್ ಮಾಡಿ ಮಾತನಾಡಿದಾಗ, ದೂರುದಾರರು ನಿಮಗೆ ಎಷ್ಟು ಹಣ ಕೊಡಬೇಕೆಂದು ಕೇಳಿದ್ದು, ಅದಕ್ಕೆ ಎದುರುದಾರರು ದೂರುದಾರರಿಗೆ ತಿಳಿದಷ್ಟು ಹಣ ಕೊಡು, ತನ್ನ ಅಸಿಸ್ಟಂಟ್ ಬಾಲು ಇದ್ದಾನೆ ಅವನ ಕಡೆ ಕೊಡು ಅವನೇ ಎಷ್ಟು ಅಂತ ಹೇಳುತ್ತಾನೆಂದು ಹೇಳಿದ್ದು, ನಂತರ ಮಧ್ಯಾಹ್ನ 1.26 ಕ್ಕೆ ದೂರುದಾರರು ಬಾಲುನ ಮೊಬೈಲ್ ಸಂಖ್ಯೆ 7899720173 ನೇದ್ದಕ್ಕೆ ತನ್ನ ಮೊಬೈಲ್‌ನಿಂದ ಫೋನ್ ಮಾಡಿ ನಿಮ್ಮ ಸಾಹೇಬರು ಅಟ್ರಾಸಿಟಿ ಚೆಕ್ಕುಗಳ ಸಲುವಾಗಿ ನಿನ್ನ ಕಡೆ ಹಣ ಕೊಡಲು ಹೇಳಿದ್ದಾರೆ ನೀನು ಅವರಿಗೆ ಮಾತನಾಡಿ ಎಷ್ಟು ಕೊಡಬೇಕೆಂದು ಕೇಳಿ ತಿಳಿದುಕೋ ಎಂದು ದೂರುದಾರರು ಹೇಳಿದಾಗ, ಬಾಲುರವರು ಸಿಗ್ನಲ್ ಕೇಳುತ್ತಿಲ್ಲ ಆಫೀಸಿಗೆ ಬಾ ಎಂದು ಕರೆದಿದ್ದು, ಆಗ ದೂರುದಾರರು ಬಾಲುನ ಹತ್ತಿರ ಮಾತನಾಡಲು ಬಳ್ಳಾರಿ ತಹಶೀಲ್ದಾರ ಕಛೇರಿಗೆ ಹೋಗಿದ್ದು, ಅಲ್ಲಿ ಬಾಲು ಇರದೆ ಎದುರುದಾರರೆ ಕಛೇರಿಯಲ್ಲಿ ಇದ್ದು, ದೂರುದಾರರು ಎದುರುದಾರರನ್ನೆ ಎಷ್ಟು ಹಣ ಕೊಡಬೇಕು ಅಂತ ಕೇಳಿದಾಗ, ಎದುರುದಾರರು ಅದಕ್ಕೆ ನಿಮ್ಮ ಚೆಕ್ಕುಗಳು ಎಷ್ಟು ಎಂದು ಕೇಳಿದ್ದು, ಅದಕ್ಕೆ ದೂರುದಾರರು 8 ಚೆಕ್ಕುಗಳು ಎಂದು ಹೇಳಿದ್ದು, ಆಗ ಎದುರುದಾರರು ಹಾಗಾದರೆ ರೂ. 10,000/- ಹಣ ತಂದು ಕೊಡು ಎಂದು ಹೇಳಿರುತ್ತಾರೆ. ದೂರುದಾರರು ಲಂಚದ ಹಣ ಕೇಳಿದ ಬಗ್ಗೆ ಇರುವ ಸಂಭಾಷಣೆಯನ್ನು ತನ್ನ ಮೊಬೈಲ್‌ನಲ್ಲಿ ಧ್ವನಿ ಮುದ್ರಿಸಿಕೊಂಡಿರುತ್ತಾರೆ.

iii. ದಿನಾಂಕ 16-01-2019 ರಂದು ಮಧ್ಯಾಹ್ನ 3.00 ಗಂಟೆಗೆ ದೂರುದಾರರು ತನಿಖಾಧಿಕಾರಿಗಳನ್ನು ಭೇಟಿಯಾಗಿ ಲಂಚದ ಹಣ ಕೇಳಿದ ಬಗ್ಗೆ ದೂರು

ನೀಡಿದ್ದು, ಅದರ ಆಧಾರದ ಮೇಲೆ ಬಳ್ಳಾರಿ ಎಸಿಬಿ ಪೋಲಿಸ್ ಠಾಣೆ ಮೊ.ಸಂ: 1/2019 ರಲ್ಲಿ ಕಲಂ 7(ಎ) ಭ್ರಷ್ಟಾಚಾರ ನಿಗ್ರಹ ಕಾಯ್ದೆ 1998 ರ ಅಡಿ ಪ್ರಕರಣ ದಾಖಲಿಸಿರುತ್ತಾರೆ.

iv. ತನಿಖಾಧಿಕಾರಿಗಳು ಜಪ್ತಿ ಪೂರ್ವದ ಪಂಚನಾಮೆಯ ಎಲ್ಲ ಔಚಿತ್ಯ ಪೂರ್ವ ನಡವಳಿಕೆಗಳನ್ನು ದೂರುದಾರರು, ನೆರಳು ಸಾಕ್ಷಿ ಹಾಗೂ ಸಹಪಂಚರ ಸಮಕ್ಷಮ ನಿರ್ವಹಿಸಿದ ನಂತರ ಅದೇ ದಿನ ಸಂಜೆ 5.40 ಗಂಟೆಗೆ ದೂರುದಾರರು ಎದುರುದಾರರು ತಿಳಿಸಿದಂತೆ ಬಳ್ಳಾರಿ ತಾಲ್ಲೂಕು ಕಛೇರಿ ಆವರಣದಲ್ಲಿರುವ ಬಳ್ಳಾರಿ ತಾಲ್ಲೂಕು ಗ್ರಾಮಲೆಕ್ಕಾಧಿಕಾರಿಗಳ ಸಂಘದ ಹಾಲ್‌ನಲ್ಲಿರುವ ಸಂಘದ ಅಧ್ಯಕ್ಷರ ಕೊಠಡಿಯಲ್ಲಿ ಎದುರುದಾರರನ್ನು ಭೇಟಿಯಾಗಿ ರೂ. 10,000/- ಲಂಚದ ಹಣವನ್ನು ನೀಡಿರುತ್ತಾರೆ. ಸದರಿ ಹಣವನ್ನು ಎದುರುದಾರರು ಬಲಗೈಯಿಂದ ತೆಗೆದುಕೊಂಡು ಎರಡು ಕೈಗಳಿಂದ ಎಣಿಸಿಕೊಂಡು ತಮ್ಮ ಎಡಗೈಯಿಂದ ಪ್ಯಾಂಟಿನ ಹಿಂಭಾಗದ ಎಡಗಡೆ ಜೇಬಿನಲ್ಲಿ ಇಟ್ಟುಕೊಂಡಿರುತ್ತಾರೆ. ಆಗ ದೂರುದಾರರು ತನ್ನ ಎರಡೂ ಕೈಗಳಿಂದ ತಲೆಯನ್ನು ಸವರಿಕೊಂಡು ಸನ್ನೆ ಮಾಡಿರುತ್ತಾರೆ.

v. ಆ ಸಂಧರ್ಭದಲ್ಲಿ ತನಿಖಾಧಿಕಾರಿಗಳು ಎದುರುದಾರರ ಇದ್ದಲ್ಲಿಗೆ ಬಂದು ಪರಿಚಯಿಸಿಕೊಂಡು ಪ್ರತ್ಯೇಕವಾದ ಬಟ್ಟಲಿನಲ್ಲಿದ್ದ ಸೋಡಿಯಮ್ ಕಾರ್ಬೊನೇಟ್ ದ್ರಾವಣದಲ್ಲಿ ಎದುರುದಾರರ ಎರಡೂ ಕೈಬೆರಳುಗಳನ್ನು ಪ್ರತ್ಯೇಕವಾಗಿ ಅದ್ದಿಸಿ ತೆಗೆಯಲಾಗಿ ದ್ರಾವಣವು ತಿಳಿ ಗುಲಾಬಿ ಬಣ್ಣಕ್ಕೆ ತಿರುಗಿದ್ದು, ಸದರಿ ದ್ರಾವಣವನ್ನು ಪ್ರತ್ಯೇಕವಾದ ಖಾಲಿ ಬಾಟಲುಗಳಲ್ಲಿ ಸಂಗ್ರಹಿಸಿದ್ದು ಇರುತ್ತದೆ. ತನಿಖಾಧಿಕಾರಿಗಳು ಎದುರುದಾರರನ್ನು ಹಣದ ಬಗ್ಗೆ ವಿಚಾರಿಸಲಾಗಿ, ಎದುರುದಾರರು ಪಡೆದ ಹಣವನ್ನು ತನ್ನ ಪ್ಯಾಂಟಿನ ಹಿಂಭಾಗದ ಎಡ ಜೇಬಿನಿಂದ ಹಣವನ್ನು ತೆಗೆದು ಹಾಜರುಪಡಿಸಿದ್ದು, ಅವುಗಳನ್ನು ಪರಿಶೀಲಿಸಲಾಗಿ ರೂ.500/- ಮುಖಬೆಲೆಯ 20-ನೋಟುಗಳು ಇದ್ದು, ಅವು ಒಟ್ಟು ರೂ.10,000/-ಗಳಾಗಿರುತ್ತವೆ. ಸದರಿ ನೋಟುಗಳ ಮುಖಬೆಲೆ ಹಾಗೂ ಸಂಖ್ಯೆಗಳು ಪ್ರಾಯೋಗಿಕ ಪಂಚನಾಮೆಯಲ್ಲಿ ಬರೆದುಕೊಂಡಂತಹ ನೋಟುಗಳ ಮುಖಬೆಲೆ ಹಾಗೂ ಸಂಖ್ಯೆಗಳು ತಾಳೆಯಾಗಿದ್ದು ಇರುತ್ತದೆ. ಈ ಬಗ್ಗೆ ವಿಚಾರಿಸಲಾಗಿ ಎದುರುದಾರರು ಯಾವುದೇ ಸಮಂಜಸವಾದ ಉತ್ತರವನ್ನು ನೀಡಿರುವುದಿಲ್ಲ.

vi. ಆಗ ಸದರಿ ಎದುರುದಾರರಿಂದ ದೊರೆತ ಹಣವನ್ನು ಜಪ್ತ ಮಾಡಿಕೊಂಡು ಪಂಚರ ಸಮಕ್ಷಮ ತನಿಖಾಧಿಕಾರಿಗಳು ಪಂಚನಾಮೆ ಜರುಗಿಸಿರುತ್ತಾರೆ ಹಾಗೂ ಎದುರುದಾರರನ್ನು ದಸ್ತಗಿರಿ ಮಾಡಿರುತ್ತಾರೆ. ತನಿಖಾಧಿಕಾರಿಗಳು ಸಂಪೂರ್ಣ

ತನಿಖೆಯನ್ನು ಪೂರೈಸಿ, ಅಭಿಯೋಜನಾ ಮಂಜೂರಾತಿಯನ್ನು ಪಡೆದು ಮಾನ್ಯ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿ ಸಲ್ಲಿಸಿರುತ್ತಾರೆ.

vii. ಧ್ವನಿ ವಿಶ್ಲೇಷಣಾ ವರದಿಯಲ್ಲಿ ಮೊಬೈಲ್ ಧ್ವನಿ ಮುದ್ರಣವು ಎದುರುದಾರರ ಧ್ವನಿಯೊಂದಿಗೆ ತಾಳೆಯಾಗಿರುವುದು ಧೃಢಪಟ್ಟಿರುತ್ತದೆ ಹಾಗೂ ರಾಸಾಯನಿಕ ತಜ್ಞರ ಪರೀಕ್ಷಾ ವರದಿಯಲ್ಲಿ ಎದುರುದಾರರಿಂದ ತನಿಖಾಧಿಕಾರಗಳು ಸಂಗ್ರಹಿಸಿದ ವಸ್ತುಗಳಲ್ಲಿ ಫಿನಾಫ್ತಲೀನ್ ಅಂಶ ಇರುವುದು ಧೃಢಪಟ್ಟಿರುತ್ತದೆ.

viii. ತನಿಖಾ ವರದಿಯ ವಿವರಗಳನ್ನು ಪರಿಶೀಲಿಸಲಾಗಿ, ಎದುರುದಾರರು ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ಕಲಂ 2(6)ರ ಪ್ರಕಾರ ಸರ್ಕಾರಿ ನೌಕರರಾಗಿದ್ದು, ಅದೇ ಅಧಿನಿಯಮದ 2(2)ರಂತೆ ಕರ್ತವ್ಯ ದುರುಪಯೋಗ ಪಡಿಸಿಕೊಂಡು ತಮ್ಮ ಸ್ವಲಾಭಕ್ಕಾಗಿ ಭ್ರಷ್ಟಾಚಾರ ಎಸಗಿ ಶಿಸ್ತು ಕ್ರಮಕ್ಕೆ ಒಳಪಡಿಸಲು ಅರ್ಹರಾಗಿರುವುದು ಕಂಡು ಬರುತ್ತದೆ.

2) ಮೇಲೆ ಹೇಳಿದ ಕಾರಣಕ್ಕಾಗಿ ಎದುರುದಾರರ ಮೇಲೆ ಶಿಸ್ತು ಕ್ರಮಕ್ಕಾಗಿ ಇಲಾಖಾ ವಿಚಾರಣೆ ನಡೆಸಲು ಸಂಬಂಧ ಪಟ್ಟ ಪ್ರಾಧಿಕಾರಕ್ಕೆ ಏಕೆ ಶಿಫಾರಸ್ಸು ಮಾಡಬಾರದು ಎನ್ನುವ ಬಗ್ಗೆ, ಎದುರುದಾರರಿಂದ ಕಾರಣ ಪಡೆಯಲು ಪರಿವೀಕ್ಷಣಾ ಟಿಪ್ಪಣಿಯನ್ನು ಎದುರುದಾರರಿಗೆ ಕಳುಹಿಸಲಾಗಿ, ಎದುರುದಾರರು ಪರಿವೀಕ್ಷಣಾ ಟಿಪ್ಪಣಿಗೆ ತಮ್ಮ ಉತ್ತರವನ್ನು ಸಲ್ಲಿಸಿದ್ದಾರೆ. ಆದರೆ ಎದುರುದಾರರು ನೀಡಿರುವ ಉತ್ತರದಲ್ಲಿ, ಅವರ ವಿರುದ್ಧದ ನಡವಳಿಯನ್ನು ಕೈ ಬಿಡಲು ಸೂಕ್ತ/ಸಮಂಜಸ/ಸಮಾಧಾನಕರ ಕಾರಣ ತೋರಿಸಿಲ್ಲವೆಂಬ ಅಭಿಪ್ರಾಯಕ್ಕೆ ಬರಲಾಗಿದೆ.

3) ಕಡತದಲ್ಲಿಯ ಸಂಗತಿಗಳು ಹಾಗೂ ದಾಖಲಾತಿಗಳಿಂದ, ಎದುರುದಾರರು ಸರ್ಕಾರಿ/ಸಾರ್ವಜನಿಕ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ ಸಂಪೂರ್ಣ ಕರ್ತವ್ಯ ನಿಷ್ಠತೆ ಮತ್ತು ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡ ದುರ್ವರ್ತನೆ/ದುರ್ನಡತೆ ಮೇಲ್ನೋಟಕ್ಕೆ ಕಂಡುಬರುತ್ತದೆ.

4) ಅದಲ್ಲದೆ ಎದುರುದಾರರು ಸರ್ಕಾರಿ ನೌಕರರಾಗಿದ್ದು, ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ, 1966ರ ನಿಯಮ 3(1) ರ ಅಡಿಯಲ್ಲಿ ದುರ್ವತನೆ/ದುರ್ನಡತೆ ಕಂಡುಬರುವುದರಿಂದ, ಸದರಿಯವರ ವಿರುದ್ಧ ಇಲಾಖಾ ಶಿಸ್ತು ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ಕಲಂ 12(3) ರ ಅಡಿ ಪ್ರದತ್ತವಾದ ಅಧಿಕಾರದಡಿ, ಈಗ ಈ ವರದಿ ಮೂಲಕ ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ ಹಾಗೂ ಎದುರುದಾರರ ವಿರುದ್ಧದ ಇಲಾಖಾ ವಿಚಾರಣೆ ಮಾಡಲು,

ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 14(ಎ)ರಡಿ ಈ ಸಂಸ್ಥೆಗೆ ವಹಿಸಬೇಕೆಂದು ಕೋರಿದೆ.

5) ಹಾಗೆಯೇ ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ಕಲಂ 12(4) ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ **ಮೂರು ತಿಂಗಳೊಳಗೆ** ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

6/9/21

(ನ್ಯಾಯಮೂರ್ತಿ ಬಿ.ಎಸ್. ಪಾಟೀಲ್)
ಉಪಲೋಕಾಯುಕ್ತರು-2
ಕರ್ನಾಟಕ ರಾಜ್ಯ, ಬೆಂಗಳೂರು.